ನನಗಾಗಿ ತನ್ನೆಲ್ಲ ದುಃಖಾನ ನುಂಗಿ ಅಪ್ಪ ಮೇಲೆದ್ದುಬಿಟ್ಟ. ಯಾಕೇಂದ್ರೆ ನಾನು ಅಪ್ಪನ ಬದುಕಾಗಿದ್ದೆ. ಅವನ ಕನಸು ಕೂಡ ನಾನೇ ಆಗಿದ್ದೆ.

## ನಾಯಕರು ಹೇಳಿದ್ದು – 2

ನಾನು ಕೆಲಸಕ್ಕೆ ಸೇರಿದಾಗ ಅಪ್ಪ ಅದೆಷ್ಟು ಖುಷಿ ಪಟ್ಟಿದ್ದ ಅಂದ್ರೆ ನನ್ನ ಒಂದು ತಿಂಗಳ ಸಂಬಳದಷ್ಟು ಹಣಕ್ಕೆ ಮುಂಚಿತವಾಗೀನೇ ಸಾಲ ಮಾಡಿ ನೆಂಟರಿಗೆ, ಮನೆ ಅಕ್ಕಪಕ್ಕದೋರಿಗೆ ಸಾಕು ಸಾಕೆನ್ನುವಷ್ಟು ಬಾಡಿನೂಟ ಹಾಕಿದ್ದ. ಅವತ್ತು ಅಪ್ಪನ ಸಂತೋಷ ಮುಖ್ಯ ಅನಿಸಿತ್ತು ನನಗೆ. ಎದುರು ಮಾತಾಡದೆ ಅಪ್ಪ ಹೇಳಿದ್ದೆಲ್ಲ ಮಾಡಿದ್ದೆ. ಅದಾದ ಎರಡು ವರ್ಷಕ್ಕೆಲ್ಲ ಅಪ್ಪ ನನಗೆ ತನ್ನ ತಂಗಿ ಮಗಳು ಸುಮಿತ್ರಳನ್ನು ತಂದು ಮದುವೆ ಮಾಡಿದ್ದ. ಆ ದಿನಗಳಲ್ಲಿ ಅಪ್ಪನ ಕಣ್ಣಲ್ಲಿ ನೆಮ್ಮದಿ ಇತ್ತು. ಅದೆಲ್ಲ ಸಂತೋಷ ಕೆಲವು ವರ್ಷ ಮಾತ್ರ ಇತ್ತು ಅಷ್ಟೆ.

